Feeding of Budanoor Tank with water from Cauvery river or from Channels Running nearby.

Q.—234. Sri G. A. THIMMAPPA GOWDA (Arkalgud).

Will the Government be pleased to state :—

(*a*) whether the people of Budanoor village, Ramanathapur Hobli have made any representation to the Agricultural Minister during October 1956, regarding feeding of Budanoor Tank with water from Cauvery river or from channels running nearby ;

(*b*) whether any action has been taken to supply water to the tank ?

A.—Sri H. K VEERANNA GOWDH (Minister for Public Works)

(*a*) Yes.

(*b*) Out of two possible proposals that were investigated, one was found to be not practicable and another costly and prohibitive.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಉತ್ತರದಲ್ಲಿ ಒಂದು ಯೋಜನೆ ಕಾರ್ಯಗತ ಮಾಡಲು ಸಾಧ್ಯವಾಗಿಲ್ಲವೆಂದು ಹೇಳಿದೆ, ಅದು ಯಾವುದು? ಏಕೆ?

*ಶ್ರೀ ಎಚ್. ಕೆ. ವೀರಣ್ಣಗೌಡ.—ನಾಲೆಯಿಂದ ನೀರನ್ನು ತೆಗೆದುಕೊಳ್ಳುವುದು, ಅದರಿಂದ ಅಷ್ಟು ಅನುಕೂಲವಾಗುವುದಿಲ್ಲ. ಭೂಮಿಗೆ ಸಾಕಾಗುವಷ್ಟು ನೀರು ನಾಲೆಯಿಂದ ಒದಗುವಂತಿಲ್ಲ, ಆದ್ದರಿಂದ ಕಾರ್ಯಗತ ಮಾಡಲು ಸಾಧ್ಯವಿಲ್ಲವೆಂದು ಹೇಳುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದಕ್ಕೆ ಅಂದಾಜು ಮಾಡಿದ್ದಾರೆಯೆ ? ಮಾಡಿದ್ದರೆ ಯಾವಾಗ ಮಾಡಿದರು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎರಡು ಮೂರು ಆಲ್ಟರ್‌ನೇಟಿವ್ ಮಾಡಬೇಕಾಗಿ ಬಂತು, ಯಾವಾಗ ಮಾಡಿದೆಯೋ ಗೊತ್ತಿಲ್ಲ. 38 ಸಾವಿರ ರೂಪಾಯಿಗಳಿಗೆ ಒಂದು ಅಂದಾಜಾಗಿದೆ, ಕಾವೇರಿ ನದಿಯಿಂದ ನೀರು ತೆಗೆದುಕೊಳ್ಳುವುದಕ್ಕೆ ನಾಲ್ಕು ಲಕ್ಷ ರೂಪಾಯಿಗಳ ಅಂದಾಜಾಗಿದೆ. ಎಕರೆಗೆ 230 ರೂಪಾಯಿಗಳ ಖರ್ಚಾಗುತ್ತದೆ. ನಾಲೆಯಿಂದ ನೀರನ್ನೊದಗಿಸುವುದಾದರೆ ಕೆಲವು ತಿಂಗಳು ನೀರಿರುವುದಿಲ್ಲ, ಅನನುಕೂಲವಾಗುತ್ತದೆ. ಈ ಎರಡು ಯೋಜನೆಗಳಿಂದಲೂ ಬಹಳ ದುಬಾರಿ ಖರ್ಚಾಗುತ್ತದೆ, ಆದರಿಂದ ಪ್ರಯೋಜನವಾಗುವುದಿಲ್ಲ ಎಂದು ಕೈಬಿಟ್ಟಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಯಾವ ಇಲಾಖೆ ಈ ಕೆಲಸ ನಡೆಸಬೇಕೆಂಬ ವಿಚಾರದಲ್ಲಿ ಜಿಜ್ಞಾಸೆಯಿದೆಯೆಂದು ನನಗೆ ತಿಳಿದು ಬಂದಿದೆ. ಅದು ನಿಜವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಹೇಳುವುದು ಸಮಾಚಾರ. ಆದರೆ ಅದನ್ನು ನಿಜವೆಂದು ಹೇಳುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಸಂಬಂಧಪಟ್ಟ ಇಲಾಖೆ ಈ ಕೆಲಸ ಮಾಡಬೇಕು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಕೆರೆಯ ನೀರಿನಿಂದ ಎಷ್ಟು ಎಕರೆ ನೀರಾವರಿಯಾಗುತ್ತದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—135 ಎಕರೆ ತರಿ, 35 ಎಕರೆ ಬಾಗಾಯ್ತು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನೀರು ಬೇಕಾಗಿರುವಾಗ ವರ್ಷಕ್ಕೆ ಒಂದೆರಡು ಸಾರಿ ಮಾತ್ರ ಕೊಟ್ಟರೆ ಸಾಕೆಂದು ಕೇಳುತ್ತಿದ್ದಾರೆ. ಈ ದೃಷ್ಟಿಯಿಂದ ಪುನರ್ವಿಮರ್ಶೆ ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪುನರ್ವಿಮರ್ಶೆ ಮಾಡಬೇಕೆಂದು ಅಪೇಕ್ಷೆ ಪಟ್ಟರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಮತ್ತೊಂದು ಸಾರಿ ಈಗ ಸಲಹೆ ಮಾಡಿರುವುದನ್ನು ದೃಷ್ಟಿಯಲ್ಲಿಟ್ಟು ಪರಿಶೀಲಿಸುವಂತೆ ಹೇಳುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಗ್ರಾಮಸ್ಥರು ಇದಕ್ಕೆ ತಗಲುವ ಖರ್ಚನ್ನು ತಾವೇ ಹೊತ್ತುಕೊಳ್ಳುವುದಾಗಿ ಭರವಸೆ ಕೊಟ್ಟರೆ ಏರ್ಪಾಡು ಮಾಡಬಹುದಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ರಾಯರಾದ ತಮಗೇ ತಿಳಿದಿರುವಂತೆ, 230 ರೂಪಾಯಿಗಳನ್ನು ಕೊಡಲು ಯಾರೂ ಒಪ್ಪುವುದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಾನು ಹೇಳಿದ ಹಾಗೆ, ನಾಲೆಯಿಂದ ಈ ಕೆರೆಗೆ ವರ್ಷಕ್ಕೆ ಎರಡು ಸಾರಿಯಾದರೂ ನೀರನ್ನು ಬಿಟ್ಟು ಕೆರೆ ತುಂಬಿಸಲು ಏರ್ಪಾಡುಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನು ಪರಿಶೀಲಿಸುತ್ತೇವೆ.

Estimates for the construction of Feeder Channel in Sothehalla.

Q.—292. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether and if so when has the estimate been prepared for the construction of feeder channel of Sothehalla to feed water to Konanur tank ;

(*b*) whether the estimate has been sanctioned and if not, why ;

(*c*) whether the people concerned (atchkatdars) have agreed to all the conditions laid down by the Government ?

A.—Sri H. K. VEERANNA GOWDH (Minister for Public Works).—

(*a*) Yes; in May 1953.

(*b*) No; because no agreement could be reached by the old Mysore State with the previous Coorg Government regarding the sharing of waters.

(*c*) Yes.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದರ ಪ್ಲಾನ್ ಮತ್ತು ಅಂದಾಜು ತಯಾರಾದದ್ದು ಯಾವಾಗ ?

*ಶ್ರೀ ಎಚ್. ಕೆ. ವೀರಣ್ಣಗೌಡ.—1953ನೆಯ ಇಸವಿ ಮೇ ತಿಂಗಳಲ್ಲಿ.